

# ವಾರ್ತಾ ವಿಶ್ಲೇಷಣೆ

## ಸತ್ಸಂಗ ಉಗ್ರರನ್ನು ನಿರಾಯುಧಗೊಳಿಸಬಲ್ಲುದೆ?

ಪ್ರಸಿದ್ಧ ಬೌದ್ಧ ಸಂನ್ಯಾಸಿ ತಿಚ್ ನ್ಹಾಟ್ ಹನ್ಹ್(Thich Nhat Hanh)ರು ಕಳೆದ ಜನವರಿಯಲ್ಲಿ ಮೂರು ತಿಂಗಳು ಕಾಲ ಆಧ್ಯಾತ್ಮಿಕ ಶಿಬಿರವನ್ನು ನಡೆಸಲು ಅಮೆರಿಕದ ಲಾಸ್ ಏಂಜಲ್ಸ್‌ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದಾಗ ಅವರಿಗೆ ದೊರೆತದ್ದು ಸ್ವಾಗತವಲ್ಲ, ಬದಲಾಗಿ ಭದ್ರತಾ ಸಿಬ್ಬಂದಿಯವರಿಂದ ಅನಗತ್ಯ ಕಿರುಕುಳ. ಅವರ ಜೋಳಿಗೆ ಮತ್ತು ಬ್ಯಾಗ್‌ಗಳನ್ನು ತಪಾಸಣೆ ಮಾಡಿ, ಅವರ ವೈಯಕ್ತಿಕ ಪತ್ರಗಳನ್ನೆಲ್ಲ ಓದಿದ್ದೇ ಅಲ್ಲದೆ, ಜೊತೆಗಿದ್ದ ಸಹ ಸಂನ್ಯಾಸಿಯನ್ನು, ಎಂದಾದರೂ ಬಾಂಬ್ ತಯಾರಿಸಿದ್ದುಂಟೇ ಎಂದು ಕೇಳಿ ತಮ್ಮ ದರ್ಪ ಮೌಢ್ಯಗಳನ್ನು ಪ್ರದರ್ಶಿಸಿದರೆಂಬ ವರದಿ ಇದೆ.

ಈ ಧರ್ಮಗುರುವಿಗೆ ಭದ್ರತಾ ಸಿಬ್ಬಂದಿಯ ವಿಚಿತ್ರ ವರ್ತನೆಯಿಂದ ಸಿಟ್ಟು, ಆಕ್ರೋಶಗಳ ಬದಲಾಗಿ ಉಂಟಾಗಿದ್ದು ಅವರ ಬಗ್ಗೆ ಮರುಕ. ಆತ ಸಂದರ್ಶನವೊಂದರಲ್ಲಿ ಹೀಗೆ ಹೇಳುತ್ತಾರೆ : "ಭಯೋತ್ಪಾದನೆಯ ವಿರುದ್ಧ ಸಮರವು ನಾವು ಎದುರಾಗುವ ಪ್ರತಿಯೊಬ್ಬನೂ ಭಯೋತ್ಪಾದಕನಾಗಿರಬಹುದೇನೋ ಎಂದು ಶಂಕಿಸುವಂತೆ ಮಾಡಿದೆ. ಈ ರೀತಿಯ ವಿಕೃತ ಮನೋಭಾವ ನಮ್ಮನ್ನು ಎಷ್ಟು ಅಧೋಗತಿಗೆ ಒಯ್ದಿದೆಯೆಂದರೆ ಜನರಲ್ಲಿರುವ ಒಳ್ಳೆಯತನವನ್ನು ನೋಡುವ ಅವಕಾಶಗಳೇ ಇಲ್ಲದಂತಾಗಿದೆ. ಬದಲಾಗಿ ಯಾವಾಗಲೂ ಹುಳುಕುಗಳನ್ನೇ ನೋಡುತ್ತಿದ್ದೇವೆ. ಇದು ಅತ್ಯಂತ ಶೋಚನೀಯ."

ಅಮೆರಿಕನ್ನರು ಆ ಕರಾಳ ದಿನ(ಸೆಪ್ಟೆಂಬರ್ ೧೧)ದ ಬೀಭತ್ಸತೆಯಿಂದ ಹೊರಬರಲು ಇಂದಿಗೂ ಸಾಧ್ಯವಾಗುತ್ತಿಲ್ಲ. ಅವರಿಗೆ ನೆರವಾಗಲು ವಾರ್ಷಿಕವಾಗಿ ಆಧ್ಯಾತ್ಮಿಕ ಶಿಬಿರವನ್ನು ಕೈಗೊಳ್ಳುವುದಾಗಿ ಈ ಬೌದ್ಧ ಸಂನ್ಯಾಸಿ ತಿಳಿಸಿದ್ದಾರೆ. ಅವರು ಇದನ್ನು "ಅಮೆರಿಕಕ್ಕೆ ತಮ್ಮ ಶಾಂತಿಕೊಡುಗೆ" ಎಂದು ಕರೆದಿದ್ದಾರೆ. ಸಾರ್ವಜನಿಕ ಉಪನ್ಯಾಸಗಳು, ಶಿಬಿರಗಳಲ್ಲಿ ಬೌದ್ಧ ಸಂಪ್ರದಾಯದ ಪ್ರಾಚೀನ ಸಾಧನೆಯಾದ ಸತಿಪಟ್ಠಾನ (ಸ್ಮೃತಿಯಲ್ಲಿ ನೆಲೆಸುವುದು), ದೀರ್ಘ ಉಸಿರಾಟ, ಮತ್ತು ವರ್ತಮಾನದ ಕ್ಷಣಗಳನ್ನು ಸಂಪೂರ್ಣವಾಗಿ ಬದುಕುವುದು ಇವುಗಳ ಬಗ್ಗೆ ವಿಶೇಷ ತರಬೇತಿ ನೀಡುವುದು ಇವರು ಕೈಗೊಂಡಿರುವ ಕಾರ್ಯಕ್ರಮಗಳಾಗಿವೆ. ಈ ರೀತಿಯ ತರಬೇತಿಯಿಂದ ನಮ್ಮೊಳಗಿನ, ನಮ್ಮ ಕುಟುಂಬ ಸಮಾಜಗಳಲ್ಲಿನ ಹಿಂಸೆ ಅಶಾಂತಿಯ ಪ್ರವೃತ್ತಿಗಳು ನಾಶವಾಗಿ ನಿಜವಾದ ಶಾಂತಿ ನೆಲೆಸುವುದರಲ್ಲಿ ಅದು ಸಹಾಯಕವಾಗುತ್ತದೆ ಎಂಬುದು ಈ ಬೌದ್ಧಗುರುವಿನ ದೃಢವಾದ ನಿಲುವು.

೭೭ ವರ್ಷದ ಹಿರಿಯ ಬೌದ್ಧ ಸಂನ್ಯಾಸಿ, ತಮ್ಮ ಶಾಂತಿ ಪ್ರಯತ್ನಕ್ಕಾಗಿ ನೊಬೆಲ್ ಪಾರಿತೋಷಕಕ್ಕೆ ಹೆಸರಿಸಲ್ಪಟ್ಟು, ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ತಮ್ಮ ಧ್ಯಾನ ಶಿಬಿರಗಳಿಂದ ಮಾನಸಿಕವಾಗಿ ಬಳಲಿದ ಮಂದಿಗೆ ಶಾಂತಿ, ನೆಮ್ಮದಿ, ಬದುಕಿನಲ್ಲಿ ಭರವಸೆಯನ್ನು ಕಾಣಲು ಸಹಾಯಕರಾದ ಅಪೂರ್ವ ವ್ಯಕ್ತಿ ಈತ. ಮೃದುವಾಗಿ ಮಾತನಾಡುವ ವಿಯಟ್ನಾಂನ ಈ ತೆಳ್ಳಗಿನ ಸಂನ್ಯಾಸಿ ೧೯೬೬ರಿಂದ ಆ ದೇಶದಿಂದ ಹೊರಗುಳಿದು ಫ್ರಾನ್ಸ್‌ನಲ್ಲಿನ ಒಂದು ಗ್ರಾಮದಲ್ಲಿ ಬೌದ್ಧ ಮಠದಲ್ಲಿ ವಾಸಿಸುತ್ತಾರೆ. ಇವರು ಬೌದ್ಧಸಂಪ್ರದಾಯದ ಸಾಧನೆಗಳಲ್ಲಿ ಅಪೂರ್ವ ಸಿದ್ಧಿ ಪಡೆದು ತಮ್ಮ ಸಾಧನೆಯ ಫಲವನ್ನು ಇತರರಲ್ಲಿ ಹಂಚಿಕೊಳ್ಳುವ ನೂತನ ಪ್ರಯೋಗಗಳನ್ನು ಕೈಗೊಳ್ಳುತ್ತಲೇ ಇರುತ್ತಾರೆ.

ಯಾವ ಮುಚ್ಚುಮರೆಯೂ ಇಲ್ಲದೆ ನಿರ್ಭಿಡೆಯಿಂದ ಮಾತನಾಡುವ ಈ ಸಂನ್ಯಾಸಿ ಅಮೆರಿಕ ಭಯೋತ್ಪಾದನೆಯ ವಿರುದ್ಧ ಸಮರ ಸಾರಿ ಇರಾಕನ್ನು ಆಕ್ರಮಿಸಿದ್ದು ಆ ದೇಶಕ್ಕೇ ತಿರುಗೇಟು ಬಿದ್ದಿದೆ ಎನ್ನುತ್ತಾರೆ. ಭಯೋತ್ಪಾದನೆಯ ವಿರುದ್ಧ ಅಮೆರಿಕದ ಹಿಂಸಾಮೂಲದ ಪ್ರಯತ್ನಗಳಿಂದ ಆ ದೇಶಕ್ಕೆ ಶತ್ರುಗಳು ಹೆಚ್ಚಾಗಿದ್ದಾರೆಯೇ ಹೊರತು ಶಾಂತಿಸ್ಥಾಪನೆ ಮರೀಚಿಕೆಯಾಗಿದೆ.

ತಿಚ್ ನ್ಹಾಟ್ ಹನ್ಹ್‌ರು ಲೋಕಾಭಿರಾಮವಾಗಿ ಚಾ ಹೀರುತ್ತಾ, ಬೌದ್ಧಧರ್ಮದ ಉಪದೇಶಗಳಿಂದ ನಾವು ಶತ್ರುಗಳೆಂದು ತಿಳಿದಿರುವವರನ್ನು ದಾರಿಗೆ ತರಲು ಬೇಕಾದುದು "ಆಳವಾದ ಸಹಾನುಭೂತಿ ಮತ್ತು ಆಪ್ಯಾಯಮಾನವಾದ ಮಾತು" ಎನ್ನುತ್ತಾರೆ. ಉಗ್ರರನ್ನು ರಾಕ್ಷಸರೆಂದು ಬಗೆಯುವ ಬದಲು, ತಾನು ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ ಎನ್ನುತ್ತಾರೆ. ಉಗ್ರರಿಗೆ, "ನೀವು ನಮ್ಮನ್ನು ಆ ರೀತಿ ದ್ವೇಷಿಸಲು ಕಾರಣವೇನು? ಹೇಳಿ, ನಿಮ್ಮನ್ನೇನಾದರೂ ಒಂದು ಜನಾಂಗವಾಗಿ, ನಿಮ್ಮ ಸಂಸ್ಕೃತಿಯನ್ನು ಧರ್ಮವನ್ನು ನಾಶಮಾಡಲು ನಾವೆಂದಾದರೂ ಮುಂದಾಗಿದ್ದೇವೆಯೇ?" ಎಂದು ಅವರೊಡನೆ ಸಂವಾದ ನಡೆಸುವೆನೆನ್ನುತ್ತಾರೆ. "ಭಯೋತ್ಪಾದಕರು ನಮ್ಮನ್ನು ಅಪಾರ್ಥ ಮಾಡಿಕೊಂಡಿರಬಹುದು. ಹಾಗಿದ್ದರೆ ಅವರ ಗ್ರಹಿಕೆಯನ್ನು ಸರಿಪಡಿಸಬಹುದಾಗಿದೆ. ಅವರ ಗ್ರಹಿಕೆಯನ್ನು ಸರಿಪಡಿಸುವುದು ಅವರ ಮೇಲೆ ಮಾಡುವ ಬಾಂಬ್‌ಗಳ ಸುರಿಮಳೆಗಿಂತಲೂ ಎಷ್ಟೋ ಉತ್ತಮ" ಎನ್ನುತ್ತಾರೆ.

ಅವರ ಮಾತುಗಳು ಉಗ್ರರ ಉಪಟಳವನ್ನು ತೀರ ಸರಳೀಕೃತಗೊಳಿಸಿದ ಹಾರಿಕೆಯ ಮಾತುಗಳು ಎಂದು ಮೂಗುಮುರಿಯುವರಿಗೆ ಆಜೀವ ಶತ್ರುಗಳ ನಡುವೆ ಶಾಂತಿಯನ್ನು ಸ್ಥಾಪಿಸಿದ ಪವಾಡದ ತಮ್ಮ ಅನುಭವವನ್ನು ಹೀಗೆ ಹೇಳುತ್ತಾರೆ : "ಕಳೆದ ಅನೇಕ ವರ್ಷಗಳಿಂದಲೂ ಇಸ್ರೇಲಿಗಳ ಮತ್ತು ಪ್ಯಾಲೆಸ್ಟೈನ್‌ಗಳ ಒಂದೊಂದು ತಂಡವನ್ನು ಫ್ರಾನ್ಸ್‌ನಲ್ಲಿನ ನಮ್ಮ ಬೌದ್ಧಮಠಕ್ಕೆ ಕರೆತಂದೆ. ಮೊದಮೊದಲಲ್ಲಿ ಒಂದು ತಂಡದವರ ಮುಖ ಕಂಡರೆ ಮತ್ತೊಂದು ತಂಡದವರಿಗಾಗುತ್ತಿರಲಿಲ್ಲ. ಆದರೆ ನಿತ್ಯಧ್ಯಾನದಿಂದ, ತಮ್ಮ ತಮ್ಮ ಶೋಕ ನೋವಿನ ಗಾಥೆಗಳನ್ನು ಯಾರನ್ನೂ ದೂರದೆ, ನಿಂದಿಸದೆ ಹಂಚಿಕೊಳ್ಳುವಂತೆ ಪ್ರೋತ್ಸಾಹಿಸಿದಾಗ ಎರಡೂ ತಂಡಗಳಲ್ಲೂ ಅದ್ಭುತವಾದ ಪರಿವರ್ತನೆ ಕಂಡು ಬಂದಿತು." ತಿಚ್ ನ್ಹಾಟ್ ಹನ್ಹ್‌ರ ಶಾಂತಿಪ್ರಯತ್ನಗಳ ಹಿಂದಿರುವ ಈ ಆಳವಾದ ವಿಶ್ವಾಸ ೨೫೦೦ವರ್ಷಗಳಿಗೂ ಮೇಲ್ಪಟ್ಟು ಹರಿದು ಬಂದಿರುವ ಬೌದ್ಧಸಂಪ್ರದಾಯದ ನಿಲುವಿನಿಂದ ಪಡೆದದ್ದಾಗಿದೆ.

**ನ ಹಿ ವೇರೇನ ವೇರಾನಿ ಸಮ್ಮಂತೀಧ ಕದಾಚನ।**
**ಅವೇರೇನ ಚ ಸಮ್ಮಂತಿ ಏಸ ಧಮ್ಮೋ ಸನಾತನೋ॥** (ಧಮ್ಮಪದ,5)

"ಈ ಲೋಕದಲ್ಲಿ ದ್ವೇಷದಿಂದ ದ್ವೇಷಗಳು ಎಂದಿಗೂ ಶಾಂತವಾಗುವುದಿಲ್ಲ. ಅವೈರ(ದ್ವೇಷರಾಹಿತ್ಯ)ದಿಂದ ಮಾತ್ರವೇ ಅವುಗಳು ಶಾಂತವಾಗುವುವು. ಇದೇ ಸನಾತನ ಧರ್ಮವು." ◆